# ಏನ ಹೇಳಲೆ ನಾನು ಕೃಷ್ಣನ ಮಹಿಮೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 130.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 99.
3. **Note:** Lyrics given here are as per Ref. 1. The wordings in Ref. 2 are fully matching. The singer has followed these lyrics.

ರಾಗ: ಕಲ್ಯಾಣಿ ತಾಳ: ಅಟ

ಏನ ಹೇಳಲೆ ನಾನು ಕೃಷ್ಣನ ಮಹಿಮೆ
ಯಾರಿಗೂ ತಿಳಿಯದಮ್ಮ || ಪ ||

ಹೊತ್ತಾರೆದ್ದು ಯಶೋದೆ, ಮುತ್ತು ಪೋಣಿಸುತಿದ್ದಳು,
ಹತ್ತಿರಿದ್ದ ಕೃಷ್ಣ ಬಂದು, ಒಂದು ಮುತ್ತು ತೆಗೆದುಕೊಂಡು
ಸುತ್ತಲಿದ್ದ ಹುಡುಗರ ಸಹಿತ, ಹಿತ್ತಲೊಳಗೆ ಬಿತ್ತಿ ಪೋದ || ಅಪ ||

ಪರಿಪರಿ ಚಿಂತೆಯಿಂದ, ಯಶೋದೆ, ನಾರಿಯರ ಕಳುಹಿದಳು,
ಸಂದು ಸಂದಿಲಿ ಹುಡುಕಿ ಹುಡುಕಿ, ಕಂದ ಕಾಣನೆಂದು ಬರಲು,
ಒಂದು ಕ್ಷಣದಲಿ ಕೃಷ್ಣ ಬಂದು, ಎದುರಾಗಿ ನಿಂದ || 1 ||

ಕಂದಯ್ಯನ ಕರ ಪಿಡಿದು, ಯಶೋದೆ ಕರೆ ತಂದಳರಮನೆಗೆ,
ಕಂದ ಬಹಳ ಹಸಿದನೆಂದು, ತುತ್ತು ಮಾಡಿ ಉಣಿಸಿದಳು,
ಮುತ್ತು ಏನು ಮಾಡಿದೆಯೆಂದು, ಸಿಟ್ಟಿನಿಂದ ಕೇಳಿದಳು || 2 ||

ಹೆತ್ತ ತಾಯ ಕರೆದುಕೊಂಡು ಹಿತ್ತಲೊಳಗೆ, ಮುತ್ತಿನ ಗಿಡ ತೋರಿಸಿದ,
ಪಂಟೆ ಪಂಟೆಗೆ ಎಂಟು ಎಂಟು, ಗೊಂಚು ಗೊಂಚು ಜೋಲುತಿರಲು,
ಕಡಿದು ಕಡಿದು ರಾಶಿ ಹಾಕಿದ, ಪರಮ ಪುರಂದರ ವಿಠಲ ರಾಯ || 3 ||

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** Krishna, yashode, muttu, chinte, sittu, gopi, mane,
**Pravachana:** NA
**Explanation:** NA